सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**2ನೇ ಮತ್ತು 3ನೇ ಮಹಡಿ, ನಂ.16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,**
**ಇಮೇಲ್: karsec@gmail.com☎:080-22205189/93**

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ ಸಾರ್ವತ್ರಿಕ/ಉಪ ಚುನಾವಣೆ ಜುಲೈ-2023, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು, ಬಾಳೆ ಗ್ರಾಮ ಪಂಚಾಯಿತಿಯ 03- ವಗ್ಗಡೆ ಕ್ಷೇತ್ರದ ಉಪ ಚುನಾವಣೆಯನ್ನು ತಡೆಹಿಡಿಯುವ ಬಗ್ಗೆ.

**ಓದಲಾಗಿದೆ:**
1. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ: 17: ಇಜಿಪಿ: 2023 ದಿನಾಂಕ: 03.07.2023.
2. ಮಾನ್ಯ ನರಸಿಂಹರಾಜಪುರ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ದಾಖಲಾಗಿದ್ದ ಇಪಿ ಸಂಖ್ಯೆ: 02/2021ರ ಆದೇಶ ದಿನಾಂಕ: 22.05.2023
3. ಜಿಲ್ಲಾಧಿಕಾರಿಯವರು ಚಿಕ್ಕಮಗಳೂರು ಜಿಲ್ಲೆ ರವರ ಪತ್ರ ಸಂಖ್ಯೆ: ಇಎಲ್‌ಎನ್ (1) ಸಿಆರ್ 6/2023-24, ದಿನಾಂಕ: 20.06.2023
4. ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ರವರ ಆದೇಶ ಸಂಖ್ಯೆ: WP: 14608/2023, ದಿನಾಂಕ: 12.07.2023.
5. ಜಿಲ್ಲಾಧಿಕಾರಿಯವರು ಚಿಕ್ಕಮಗಳೂರು ಜಿಲ್ಲೆ ರವರ ಪತ್ರ ಸಂಖ್ಯೆ: ಇಎಲ್‌ಎನ್ (1) ಸಿಆರ್ 5/2023-24, ದಿನಾಂಕ: 15.07.2023

**********

**ಪ್ರಸ್ತಾವನೆ:-**

ರಾಜ್ಯ ಚುನಾವಣಾ ಆಯೋಗವು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು, 1993ರ ನಿಯಮ 12 ರನ್ವಯ ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಮಾನ್ಯ ನರಸಿಂಹರಾಜಪುರ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದ ಆದೇಶದಲ್ಲಿ, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು, ಬಾಳೆ ಗ್ರಾಮ ಪಂಚಾಯಿತಿಯ 03- ವಗ್ಗಡೆ ಕ್ಷೇತ್ರದ ಶ್ರೀಮತಿ ಕಲಾವತಿ ಕೋಂ ಚಂದ್ರಶೇಖರ್ ಇವರ ಸದಸ್ಯ ಸ್ಥಾನವನ್ನು ಅಸಿಂಧುಗೊಳಿಸಿ ಆದೇಶವಾಗಿರುವುದರಿಂದ ಸದರಿ ಸದಸ್ಯ ಸ್ಥಾನವು ಖಾಲಿ ಎಂದು ಜಿಲ್ಲಾಧಿಕಾರಿಗಳು ಉಲ್ಲೇಖ (3) ರಂತೆ ವರದಿ ನೀಡಿದ್ದು ತೆರವಾದ ಸ್ಥಾನಕ್ಕೆ ಜಿಲ್ಲಾಧಿಕಾರಿಗಳ ವರದಿಯನುಸಾರ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಂತೆ ಉಪ ಚುನಾವಣೆ ಘೋಷಿಸಲಾಗಿರುತ್ತದೆ.

ಮುಂದುವರೆದು, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು, ಬಾಳೆ ಗ್ರಾಮ ಪಂಚಾಯಿತಿಯ 03- ವಗ್ಗಡೆ ಕ್ಷೇತ್ರದ ಚುನಾವಣಾ ಪ್ರಕ್ರಿಯೆಯು ದಿನಾಂಕ: 06.07.2023 ರಿಂದ ಪ್ರಾರಂಭವಾಗಿದ್ದು, ಒಟ್ಟು 2 ನಾಮಪತ್ರಗಳು ಸ್ವೀಕೃತವಾಗಿರುತ್ತದೆ. ದಿನಾಂಕ: 15.07.2023 ರಂದು ಉಮೇದುವಾರಿಕೆ ಹಿಂಪಡೆದ ನಂತರದಲ್ಲಿ ಇಬ್ಬರು ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿರುತ್ತಾರೆ. ಚುನಾವಣಾ ವೇಳಾಪಟ್ಟಿಯಂತೆ ದಿನಾಂಕ: 23.07.2023 ರಂದು ಮತದಾನ ನಡೆಸಲು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಪೀಠದ ಆದೇಶ ಸಂಖ್ಯೆ: WP: 14608/2023, ದಿನಾಂಕ: 12.07.2023 ಆದೇಶದಲ್ಲಿ, ಮಾನ್ಯ ಉಚ್ಛ ನ್ಯಾಯಾಲಯವು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ 1993ರ ಕಲಂ 21 ರನ್ವಯ ಪುನರ್ ಪರಿಶೀಲಿಸಿ, ಫಲಿತಾಂಶವನ್ನು ಘೋಷಿಸುವಂತೆ ಮಾನ್ಯ ನರಸಿಂಹರಾಜಪುರ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯಕ್ಕೆ ನಿರ್ದೇಶಿಸಿ, ಸದರಿ ಪ್ರಕರಣವನ್ನು ದಿನಾಂಕ: 24.07.2023ರ ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿ, ಆದೇಶಿಸಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಪ್ರತಿಯನ್ನು ಜಿಲ್ಲಾಧಿಕಾರಿಗಳು ಉಲ್ಲೇಖ (5) ರಂತೆ ದಿನಾಂಕ: 15.07.2023 ರಂದು ಆಯೋಗಕ್ಕೆ ಕಳುಹಿಸಿದ್ದು, ಪರಿಶೀಲಿಸಲಾಗಿ, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು, ಬಾಳೆ ಗ್ರಾಮ ಪಂಚಾಯಿತಿಯ 03- ವಗ್ಗಡೆ ಕ್ಷೇತ್ರದ ಉಪ ಚುನಾವಣೆ ಪ್ರಕ್ರಿಯೆಯನ್ನು ಮುಂದುವರೆಸುವುದು ಸೂಕ್ತವಲ್ಲವೆಂದು ಆಯೋಗವು ಅಭಿಪ್ರಾಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ರಾಚುಆ:17: ಇಜಿಪಿ: 2023, ಬೆಂಗಳೂರು ದಿನಾಂಕ: 17.07.2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಂತೆ ಭಾರತ ಸಂವಿಧಾನದ ಅನುಚ್ಛೇದ 243K ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು, ಬಾಳೆ ಗ್ರಾಮ ಪಂಚಾಯಿತಿಯ 03- ವಗ್ಗಡೆ ಕ್ಷೇತ್ರದ ಉಪ ಚುನಾವಣೆಯ ಮುಂದಿನ ಪ್ರಕ್ರಿಯೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಡೆಹಿಡಿಯಲಾಗಿದೆ.

ಮುಂದುವರೆದು, ಜಿಲ್ಲಾಧಿಕಾರಿಗಳು ಸದರಿ ಗ್ರಾಮ ಪಂಚಾಯಿತಿ ಕ್ಷೇತ್ರದ ಉಪ ಚುನಾವಣಾ ಪ್ರಕ್ರಿಯೆಯನ್ನು ಮುಂದುವರೆಸದಂತೆ ಹಾಗೂ ದಿನಾಂಕ: 15.07.2023 ರವರೆಗೆ ನಡೆದಿರುವ ಉಪ ಚುನಾವಣಾ ಪ್ರಕ್ರಿಯೆಗೆ ಸಂಬಂಧಪಟ್ಟ ದಾಖಲೆಗಳನ್ನು ಮುಂದಿನ ಆದೇಶದವರೆಗೆ ಜಿಲ್ಲಾ ಖಜಾನೆಯಲ್ಲಿ ಸಂರಕ್ಷಿಸಿಡುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಚುನಾವಣಾಧಿಕಾರಿಗಳಿಗೆ ಸೂಕ್ತ ಸೂಚನೆಯನ್ನು ನೀಡಬೇಕೆಂದು ಮತ್ತು ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರಿಗೆ ಮತ್ತು ಅಭ್ಯರ್ಥಿಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಬೇಕೆಂದು ಆದೇಶಿಸಿದೆ.

ಆದೇಶಾನುಸಾರ,

17/07/2023.
(ಪ್ರಕಾಶ್ ಮರಬಳ್ಳಿ)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ,**

1. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ
2. ತಹಶೀಲ್ದಾರರು, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ
3. ಚುನಾವಣಾಧಿಕಾರಿಗಳು, ಬಾಳೆ ಗ್ರಾಮ ಪಂಚಾಯಿತಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ರವರಿಗೆ ಸೂಕ್ತ ಕ್ರಮಕ್ಕಾಗಿ